2. ಹಾಗಿದ್ದಲ್ಲಿ ಅಲ್ಲಿ ಕ್ವಾರಿಯ ಕೆಲಸ ಮಾಡುತ್ತಿರುವವರು ಯಾರು ?

3. ಕ್ವಾರಿಯ ಕೆಲಸ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು(ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ) ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಹೌದು.

2. ಲಭ್ಯವಿರುವ ಮಾಹಿತಿ ಪ್ರಕಾರ ಶ್ರೀಯುತರಾದ ಬಿಯಾ-ಉಲ್-ಹಕ್-ಮಂಚೇಗೌಡ ಮತ್ತು ಮೆ :ಗ್ರಾನೈಟ್ ಇಂಡಿಯಾ ಪ್ರೈ. ಲಿ. ಇವರು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೆಲಸ ನಿರ್ವಹಿಸುತ್ತಿದ್ದಾರೆ.

3. ಮಂಜೂರಾದ ಗುತ್ತಿಗೆ ಪ್ರದೇಶದಲ್ಲಿ ಕೆಲಸ ನಿರ್ವಹಿಸದಿರುವಂತೆ ಈಗಾಗಲೇ ಸೂಚನೆ ನೀಡಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನೆ ಪರ್ಮಿಟ್‌ನ್ನು ನೀಡದಿರುವಂತೆ ಮಾಡುವ ಗ್ರಾನೈಟ್‌ನ್ನು ತಡೆದು ಕಾನೂನಿನನ್ವಯ ಕ್ರಮವನ್ನು ಮಂಗಳೂರಿನ ಬಳಿ 5 ಚೆಕ್ ಪೋಸ್ಟ್‌ಗಳನ್ನು ತೆರೆಯುವ ಮೂಲಕ ತೆಗೆದುಕೊಂಡು, ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ನಿಯಮ 334ರ ಮೇರೆಗೆ

ವಿಷಯ: (1)ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕರಿಗೆ ಬಡ್ತಿ.

ಶ್ರೀ ಪಿ. ಬಸವರಾಜ್ :- ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮ-ಇನ್-ಕಮರ್ಶಿಯಲ್ ಪ್ರಾಕ್ಟೀಸ್ ಎಂಬ ಒಂದು ಕೋರ್ಸ್ ಇದ್ದು ಇದರಲ್ಲಿ ಕನ್ನಡ ಮತ್ತು ಇಂಗ್ಲೀಷ್ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳು ಒಳಗೊಂಡಿವೆ. ಈ ವಿಷಯಗಳಿಗೆ ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ ಅರ್ಹತೆಯಾಗಿ : ಎಸ್ ಎಸ್ ಎಲ್ ಸಿ ಹಾಗೂ ಟೈಪ್‌ರೈಟಿಂಗ್ ಮತ್ತು ಶೀಘ್ರಲಿಪಿ ಸೀನಿಯರ್ ಗ್ರೇಡ್ ಅಥವಾ ಡಿಪ್ಲೋಮ ಇನ್ ಕಮರ್ಶಿಯಲ್ ಪ್ರಾಕ್ಟೀಸ್‌ನಲ್ಲಿ ತೇರ್ಗಡೆಯಾಗಿರಬೇಕೆಂದು ನಿಗದಿಪಡಿಸಿ ನೇಮಕ ಮಾಡಿಕೊಂಡಿದ್ದರು. ಹೀಗೆ ಕೆಲಸ ಮಾಡುತ್ತಿರುವ ಸಹ ಉಪನ್ಯಾಸಕರುಗಳಿಗೆ ಕೊಟ್ಟುಮೇಲೆ ಅವರನ್ನು ಅದೇ ಕೋರ್ಸ್‌ನ ಇತರ ವಿಷಯಗಳಿಗೆ ಭೋದಿಸಲು ನಿಯುಕ್ತಿ ಮಾಡಲಾಗುತ್ತಿದೆ. ಹೀಗೆ ಮಾಡುವುದರಿಂದ ಅರ್ಹತೆ ಇಲ್ಲದ ಸಹ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳು ಇಬ್ಬರೂ ತೊಂದರೆಗೆ ಒಳಪಡಬೇಕಾಗುತ್ತದೆ. ಆದುದರಿಂದ ದಯಮಾಡಿ ಯಾವ ಅರ್ಹತೆಯ ಮೇಲೆ ನೇಮಕ ಹೊಂದಿರುತ್ತಾರೋ ಅವರಿಗೆ ಅರ್ಹತೆ ಇಲ್ಲವಾದಲ್ಲಿ ಅಂಥ ಇತರ ವಿಷಯಗಳನ್ನು ಭೋದಿಸಲು ನಿಯುಕ್ತಿ ಮಾಡಬಾರದು ಮತ್ತು ಅವರಿಗೆ ಬಡ್ತಿ ಕೊಟ್ಟಾದ ಮೇಲೆಯೂ ಲೆಕ್ಚರರ್ ಇನ್ ಶಾರ್ಟ್‌ಹ್ಯಾಂಡ್ ಅಂಡ್ ಟೈಪರೈಟಿಂಗ್ ಎಂಬ ಹುದ್ದೆಯಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 3-9-87ಕ್ಕೆ ಮುಂಚೆ ಜಾರಿಯಲ್ಲಿದ್ದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕ ಹುದ್ದೆಯನ್ನು ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ ತುಂಬಲು ಕಾಮರ್ಸ್‌ನಲ್ಲಿ ಡಿಗ್ರಿ ಮತ್ತು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ 2 ವರ್ಷಗಳ ಸೇವಾ ಅನುಭವ ನಿಗದಿಪಡಿಸಲಾಗಿತ್ತು. ಇದರಿಂದ ಕಾಮರ್ಸ್ ಡಿಗ್ರಿ ವಿದ್ಯಾರ್ಹತೆ ಹೊಂದಿರದೇ ಇದ್ದ ಸಹಾಯಕ ಉಪನ್ಯಾಸಕರಿಗೆ ಬಡ್ತಿ ಅವಕಾಶ ದೊರೆಯದೇ ಅವರುಗಳು ಸಹಾಯಕ ಉಪನ್ಯಾಸಕ ವರ್ಗದಲ್ಲೇ ಕೊನೆಯವರೆಗೂ ಉಳಿಯುವ ಸಂಭವವಿತ್ತು.

ಆದರೆ ದಿನಾಂಕ 3-9-87 ರಿಂದ ಜಾರಿಯಾದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಉಪನ್ಯಾಸಕರ ಹುದ್ದೆಯನ್ನು ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ

ತುಂಬಲು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ 5 ವರ್ಷ ಸೇವಾ ಅನುಭವ ನಿಗದಿಪಡಿಸಿದೆ.

ಆದ್ದರಿಂದ ಬಿ.ಕಾಂ. , ವಿದ್ಯಾರ್ಹತೆ ಹೊಂದಿಲ್ಲದೇ ಇದ್ದರೂ ಎಸ್.ಎಸ್.ಎಲ್.ಸಿ. ಸೀನಿಯರ್ ಟೈಪ್‌ರೈಟಿಂಗ್ ಶಾರ್ಟ್‌ಹ್ಯಾಂಡ್ ಅಥವಾ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಸಹಾಯಕ ಉಪನ್ಯಾಸಕರು 5 ವರ್ಷಗಳ ಸೇವಾ ಅನುಭವದೊಂದಿಗೆ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಬಹುದು. ಆದಾಗ್ಯೂ ಶೈಕ್ಷಣಿಕ ಕರ್ತವ್ಯ ನಿರ್ವಹಣೆಗೆ ಒಟ್ಟಾರೆ ತೊಂದರೆಯಾಗುವುದಿಲ್ಲ. ಹಾಲಿ ಬಿ. ಕಾಂ., ಪದವಿ ಅಥವಾ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ವಿದ್ಯಾರ್ಹತೆ ಹೊಂದಿಲ್ಲದೇ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಿರುವ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಿರುವರ ಸಂಖ್ಯೆ ಕೇವಲ 2 ಮಾತ್ರ.

ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕರ ಹುದ್ದೆಯಲ್ಲಿ ಬಿ.ಕಾಂ., ಎಂ. ಕಾಂ., ವಿದ್ಯಾರ್ಹತೆ ಹೊಂದಿರುವ ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮತ್ತು ಕಮರ್ಷಿಯಲ್ ಪ್ರಾಕ್ಟೀಸ್ ಕೋರ್ಸ್‌ನ ಪಠ್ಯಕ್ರಮದಲ್ಲಿ ಟೈಪ್‌ರೈಟಿಂಗ್ ಶಾರ್ಟ್‌ಹ್ಯಾಂಡ್ ವಿಷಯವೂ ಸಹ ಇರುವುದರಿಂದ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಉಪನ್ಯಾಸಕರುಗಳಿಗೆ ವಿಷಯ ಬೋಧನೆ ಹಂಚಿಕೆ ಮಾಡುವಾಗ ಅವರುಗಳ ವಿದ್ಯಾರ್ಹತೆಗೆ ತಕ್ಕಂತೆಯೇ ಬೋಧನಾ ವಿಷಯದ ಹಂಚಿಕೆ ಮಾಡುವರು ಮತ್ತು ಶೈಕ್ಷಣಿಕ ಕೆಲಸವನ್ನು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

(2) ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳಿಗೆ ಅನುಮತಿ ನೀಡುವುದರಿಂದ ಸಾರ್ವಜನಿಕರಿಗೆ ತೊಂದರೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):-ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳಿಗೆ ಲೈಸನ್ಸ್‌ಅನ್ನು ನೀಡಿರುವುದರಿಂದಾಗಿ ಜನತೆಯ ಆರೋಗ್ಯಕ್ಕೆ ಹಾನಿಯಾಗುತ್ತಿರುವುದಲ್ಲದೆ, ದಿನಬೆಳಗಾದರೆ ಕುಡುಕರ ಹಾವಳಿಯಿಂದ ಅವರ ದುರ್ನಡತೆಯಿಂದ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆ ದಿಕ್ಕುಕಾಣದೆ ಆಶಾಂತಿಯ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಆದುದರಿಂದ ಇನ್ನು ಮುಂದೆ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳನ್ನು ತೆರೆಯಲು ಅನುಮತಿ ನೀಡಕೂಡದೆಂದು ಅಬ್ಕಾರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡುವುದರ ಮೂಲಕ ಜನತೆಯ ಆರೋಗ್ಯ ಹಾಗೂ ಶಾಂತಿ ವಾತಾವರಣ ಹೆಚ್ಚುವಂತೆ ಮಾಡಬೇಕೆಂದು ಈ ಮೂಲಕ ಮಾನ್ಯ ಅಬ್ಕಾರಿ ಸಚಿವರಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಉಪಸಭಾಪತಿಯವರೆ, ಅಬಕಾರಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಚಿಲ್ಲರೆ ವ್ಯಾಪಾರದ ವೈನ್ ಶಾಪ್‌ಗಳಿಗೆ ಸಿಎಲ್-2ಎಂದು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಕೊಡುವ ಲೈಸನ್ಸ್ ಸಿಎಲ್-9 ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಎಕ್ಸ್‌ಸ್ ನಿಯಮಗಳ ಪ್ರಕಾರ ಒಂದು ಪ್ರದೇಶದ ಜನಸಂಖ್ಯೆಗೆ ಅನುಗುಣವಾಗಿ ಆ ಪ್ರದೇಶದಲ್ಲಿ ಕೊಡಬಹುದಾದ ಒಟ್ಟು ಲೈಸೆನ್ಸ್‌ಗಳ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ. ಈ ನಿಯಮದ ಪ್ರಕಾರ ನಗರ ಪ್ರದೇಶದಲ್ಲಿ 15 ಸಾವಿರ ಜನಸಂಖ್ಯೆಗೆ ಒಂದು ಸಿಎಲ್-2 ಅಂಗಡಿಯು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಏಳೂವರೆ ಸಾವಿರ ಜನಸಂಖ್ಯೆಗೆ ಒಂದು ಸಿಎಲ್-2 ಅಂಗಡಿ ಕೊಡಬಹುದೆಂದು ನೀತಿಯಾಗಿದೆ. ಈ ನೀತಿಯ ಅನುಸಾರ 30-6-87 ರಲ್ಲಿ ಆಗ ಇದ್ದ ಜನಸಂಖ್ಯೆಯ ಪ್ರಮಾಣವನ್ನು ಅನುಸರಿಸಿ ಸರ್ಕಾರ ಕೊಡಬಹುದಾದ ಲೈಸೆನ್ಸ್‌ಗಳ ಪ್ರಮಾಣವನ್ನು ಯೋಟಾ ನಿರ್ಧರಿಸಿದೆ. ಈ ನಿರ್ಧಾರದಂತೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಗಳಿಗೆ ನಿಗದಿಪಡಿಸಲಾದ ಯೋಟಾ ಮತ್ತು ಕೊಡಲಾಗಿರುವ ಲೈಸೆನ್ಸ್‌ಗಳ ವಿವರ ಹೀಗಿದೆ. ಬೆಂಗಳೂರು ಅರ್ಬನ್ ಗೊತ್ತುಪಡಿಸಿದ ಯೋಟಾ 878 ಕೊಟ್ಟ ಲೈಸೆನ್ಸ್‌ಗಳ ಸಂಖ್ಯೆ 863, ಬೆಂಗಳೂರು ಗ್ರಾಮಾಂತರ ಗೊತ್ತುಪಡಿಸಿದ